

# ರಾಮಪತ್ರೆಯ ತವರು ಆದಿಮ ಕಾಡುಗಳು

**ಉತ್ತರ ಕನ್ನಡ ಜಿಲ್ಲೆಯಲ್ಲಿನ ಜಾಯಿಕಾಯಿ ಕುಟುಂಬದ ಮರಗಳು ಹೆಚ್ಚಾಗಿ ಬೆಳೆಯುವ ಕಾಡುಗಳನ್ನು 'ಆದಿಮ ಕಾಡುಗಳು' ಎಂದು ಗುರ್ತಿಸಲಾಗುತ್ತದೆ. ಸಾಮಾನ್ಯ ಕಾಡುಗಳಿಗಿಂತ ಭಿನ್ನವಾದ, ಅಪೂರ್ವ ಜೀವವೈವಿಧ್ಯದ ಈ ಕಾಡುಗಳಲ್ಲಿ ಮನುಷ್ಯನ ಹಸ್ತಕ್ಷೇಪ ಕಡಿಮೆ.**

■ **ಸುಮಂಗಲಾ ಎಸ್ ಮುಮ್ಮಿಗಟ್ಟಿ**

ಚಿತ್ರಗಳು: ವಾಸುದೇವ್ ಆರ್.

ಸದಾ ನೀರು ಜಿನುಗುತ್ತಿರುವ ಬೆಟ್ಟ ಗುಡ್ಡಗಳು. ಮುಗಿಲೆತ್ತರಕ್ಕೆ ಬೆಳೆದು ನಿಂತಿರುವ ಮರಗಳು. ಅಲ್ಲಲ್ಲಿ ನೆಲದ ಮೇಲೆ ಹರಿವ ಝರಿಗಳು. ಬಿಸಿಲೇ ಬೀಳದ ನೆಲದಿಂದ ಮೇಲೆದ್ದು ಬಂದು ಮರವನ್ನಪ್ಪಿ ಬೆಳೆದಿರುವ ದಪ್ಪ ಕಾಂಡದ ಬಳ್ಳಿಗಳು. ಕೆಸರಿನಿಂದ ಕೂಡಿರುವ ನೆಲದ ಮೇಲೆದ್ದು ನಿಂತಿರುವ ಬೇರುಗಳು ಮತ್ತು ಅವುಗಳೊಂದಿಗೆ ಪೈಪೋಟಿ ನಡೆಸಲು ಮೊಳಕಾಲೂರಿದಂತೆ ಕಾಣುವ ಮತ್ತೊಂದು ಬಗೆಯ ಬೇರುಗಳು. ಮತ್ತೊಂದು ಕಡೆ ನೆಲದ ಮೇಲೆ ಬಿದ್ದಿರುವ ಮರ ಗಿಡಗಳ ಭಾಗಗಳು ಕೊಳೆತು ಬೀರುವ ಹಸಿ ವಾಸನೆ. ವಟಗುಟ್ಟುವ ಕಪ್ಪೆಗಳು, ಕಾಲಿಟ್ಟಲ್ಲೆಲ್ಲ ಕ್ರಿಮಿ ಕೀಟಗಳು. ನಡುಹಗಲಲ್ಲೂ ಕತ್ತಲೆಯ ಭಾವ ಹುಟ್ಟಿಸುವ ಜೀರುಂಡೆಗಳ 'ಝೀ'ಗುಟ್ಟುವ ಶಬ್ದ. ಇದು ಯಾವುದೋ ಸಿನಿಮಾ ಅಥವಾ ಡಾಕ್ಯುಮೆಂಟರಿ ದೃಶ್ಯದ ವರ್ಣನೆಯಲ್ಲ. ನಮ್ಮದೇ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ವ್ಯಾಪಿಸಿರುವ 'ಜಡ್ಡಿಗಳ' (Swamps) ಚಿತ್ರಣ. ನಮ್ಮನ್ನು ಜ್ಯುರಾಸಿಕ್ ಕಾಲಕ್ಕೆ ಕೊಂಡೊಯ್ಯುವ ಈ ಕಾಡನ್ನು ಸಾಮಾನ್ಯವಾಗಿ 'ರಾಮಪತ್ರೆಯ ಜಡ್ಡಿಗಳು' (Myristica Swamps) ಎಂದು ಕರೆಯುತ್ತಾರೆ.

ಕಾಡಿಗೆ 'ರಾಮಪತ್ರೆಯ ಜಡ್ಡಿಗಳು' ಎನ್ನುವ ಹೆಸರು ಬರಲು ಕಾರಣ, ಅಲ್ಲಿ ಜಾಯಿಕಾಯಿ ಜಾಯಿಪತ್ರೆಯ ಕುಟುಂಬದ ಮರಗಳು ಹಾಗೂ ಅದೇ ಕುಟುಂಬಕ್ಕೆ ಸೇರಿದ ರಾಮಪತ್ರೆಯ ಮರಗಳು ಪ್ರಧಾನವಾಗಿ ಬೆಳೆಯುವುದು. ಮತ್ತು ಇಲ್ಲಿ ಮಾತ್ರವೇ ಅವು ಬೆಳೆಯುವುದರಿಂದ ಈ ಜೌಗು ಪ್ರದೇಶಗಳನ್ನು ರಾಮಪತ್ರೆ ಜಡ್ಡಿಗಳು ಎಂದು ಕರೆಯುವುದು ರೂಢಿ. ಜಾಜಿಕಾಯಿ ಅಥವಾ ಜಾಯಿಕಾಯಿ ಎಂದು ಕರೆಯುವ ಈ ಪದಾರ್ಥವನ್ನು ಸಿಹಿ ತಿಂಡಿಗಳಿಗೆ, ಪಾಯಸದಂಥ ಪದಾರ್ಥಗಳಿಗೆ ಸ್ವಲ್ಪ ಸೇರಿಸುವುದರಿಂದ ಸುಗಂಧಭರಿತ ಸ್ವಾದ ಉಂಟಾಗುತ್ತದೆ.

ಹಸುಗೂಸುಗಳಿರುವ ಮನೆಗಳಲ್ಲಿ ಜಾಯಿಕಾಯಿ ಇದ್ದೇ ಇರುತ್ತಿದ್ದ ಕಾಲವೊಂದಿತ್ತು. ಶಿಶುಗಳು ಹೊಟ್ಟೆನೋವಿನಿಂದ ಬಳಲಿದರೆ, ಬೆಟ್ಟಡಿಕೆಯನ್ನು